**ಕರ್ನಾಟಕ ವಿಧಾನ ಪರಿಷತ್ತು**

**148ನೇ ಅಧಿವೇಶನ 2022**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 357 |
| ಮಾನ್ಯ ಸದಸ್ಯರ ಹೆಸರು | : | ಶ್ರೀ. ಕೆ.ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21-12-2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಟೋಲ್‌ಗಳ ಸಂಖ್ಯೆ ಎಷ್ಟು; | ಕೆಆರ್‌ಡಿಸಿಎಲ್ ಮತ್ತು ಕೆಶಿಪ್ ವತಿಯಿಂದ ಅಭಿವೃದ್ಧಿಪಡಿಸಲಾದ ರಸ್ತೆಗಳಲ್ಲಿ ಕೆಆರ್‌ಡಿಸಿಎಲ್ ವತಿಯಿಂದ 57 ಟೋಲ್ ಪ್ಲಾಜಾಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ರಾಜ್ಯದಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಡಿ 49 ಟೋಲ್ ಪ್ಲಾಜಾಗಳಿದ್ದು ಮತ್ತು ರಾಷ್ಟ್ರೀಯ ಹೆದ್ದಾರಿ ವಲಯ (ಲೋಕೋಪಯೋಗಿ ಇಲಾಖೆ) ಅಡಿಯಲ್ಲಿ 06 ಸಂಖ್ಯೆಯ ಟೋಲ್ ಪ್ಲಾಜಾಗಳು ಕಾರ್ಯ ನಿರ್ವಹಿಸುತ್ತಿದೆ, ಒಟ್ಟು ಟೋಲ್‌ಗಳ ಸಂಖ್ಯೆ 112 ಆಗಿರುತ್ತದೆ. |
| ಆ) | ಅವಧಿ ಮುಗಿದ ಟೋಲ್‌ಗಳು ಕಾರ್ಯನಿರ್ವಹಿಸುತ್ತಿದೆಯೇ; | ಅವಧಿ ಮುಗಿದಿರುವ ಯಾವುದೇ ಟೋಲ್ ಪ್ಲಾಜಾಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರು ವರದಿ ಮಾಡಿರುತ್ತಾರೆ.<br>ಕೆಶಿಪ್ ಮತ್ತು ಕೆಆರ್‌ಡಿಸಿಎಲ್ ವತಿಯಿಂದ ಅಭಿವೃದ್ಧಿಪಡಿಸಲಾದ ರಸ್ತೆಗಳ ಮೇಲೆ ಟೋಲ್ ಅಧಿಸೂಚನೆ ದಿನಾಂಕ: 07-03-2015 ರನ್ವಯ ಟೋಲ್ ಸಂಗ್ರಹಣೆ ಮಾಡಲಾಗುತ್ತಿದೆ.<br><br>ಟೋಲ್ ರಸ್ತೆಗಳಲ್ಲಿ 3 ವರ್ಷದ ಅವಧಿಗೆ ಟೆಂಡರ್ ಮುಖೇನ ಗುತ್ತಿಗೆದಾರರನ್ನು ನೇಮಕ ಮಾಡಲು ಅವಕಾಶವಿದ್ದು, ಹಾಲಿ ಟೋಲ್ ಗುತ್ತಿಗೆದಾರರನ್ನು ಗರಿಷ್ಠ 3 ತಿಂಗಳವರೆಗೆ ಮುಂದುವರೆಸಲು ಗುತ್ತಿಗೆ ಕರಾರಿನ ಕಂಡಿಕೆ 2 (ii) ರನ್ವಯ ಅವಕಾಶವಿದ್ದು, ಶುಲ್ಕ ವಸೂಲಾತಿ ನಿಲ್ಲಿಸಿದ ಪಕ್ಷದಲ್ಲಿ ಸರ್ಕಾರಕ್ಕೆ ಉಂಟಾಗಬಹುದಾದ ಆರ್ಥಿಕ ನಷ್ಟ ತಡೆಯಲು ಹೊಸ ಗುತ್ತಿಗೆದಾರರ ನೇಮಕಾತಿಯವರೆಗೆ ತಾತ್ಕಾಲಿಕವಾಗಿ ಟೋಲ್ ಗುತ್ತಿಗೆಗಳ ಗುತ್ತಿಗೆಯ ಅವಧಿಯನ್ನು ವಿಸ್ತರಿಸಲು ಕ್ರಮಕೈಗೊಳ್ಳಲಾಗಿರುತ್ತದೆ. ಈ ಕೆಳಕಂಡ ಟೋಲ್ ರಸ್ತೆಗಳಿಗೆ ಗುತ್ತಿಗೆದಾರರನ್ನು ನೇಮಿಸುವವರೆಗೆ ಅಥವಾ 90 ದಿನಗಳ ಅವಧಿಯವರೆಗೆ ಯಾವುದು ಮುಂಚಿತವಾಗುವುದೋ ಅದನ್ನು ಪರಿಗಣಿಸಿ **(whichever is earlier)** ವಿಸ್ತರಿಸಲಾಗಿದೆ.<br><br>1) ಹಿರೇಕೆರೂರು ದಿಂದ ಚಿಕ್ಕೇರೂರು, ಹಂಸಬಾವಿ, ಕೋಡ ಮತ್ತು ಹಲಗೇರಿ ಮುಖಾಂತರ ರಾಣೆಬೆನ್ನೂರು ವರೆಗೆ ರಸ್ತೆಯಲ್ಲಿ ಶುಲ್ಕ ಸಂಗ್ರಹಣೆ ಅವಧಿಯು ದಿನಾಂಕ: 15-09-2019 ರಿಂದ 14-09-2022 ರವರೆಗೆ ಗುತ್ತಿಗೆ ಕರಾರಿನನ್ವಯ ಇದ್ದು, ದಿನಾಂಕ: 15-09-2022 ರಿಂದ 90 ದಿನಗಳ ಅವಧಿಗೆ ವಿಸ್ತರಣೆ ಮಾಡಲಾಗಿದೆ. |